## ಕರ್ನಾಟಕ ಸರ್ಕಾರ

ಸಂಖ್ಯೆ: ಪಿಡಿ 82 ಎಸ್‌ಪಿಬಿ 2011(ಭಾ)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಮೊದಲನೇ ಹಂತ,
ಬೆಂಗಳೂರು, ದಿನಾಂಕ: 24.11.2011.

## ಅಧಿಕೃತ ಜ್ಞಾಪನ

ವಿಷಯ: ಕೇರಳ ರಾಜ್ಯದ ರಾಜ್ಯ ಯೋಜನಾ ಮಂಡಳಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಕೆ.ಎಂ. ಚಂದ್ರಶೇಖರ್‌ರವರು ರಾಜ್ಯಕ್ಕೆ ಭೇಟಿ ನೀಡುವ ಬಗ್ಗೆ.

\- - -

ಕೇರಳ ರಾಜ್ಯ ಸರ್ಕಾರದ ರಾಜ್ಯ ಯೋಜನಾ ಮಂಡಳಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಕೆ.ಎಂ. ಚಂದ್ರಶೇಖರ್‌ರವರು ದಿನಾಂಕ: 30.11.2011ರ ಅವಧಿಯಿಂದ ದಿನಾಂಕ: 6.12.2011ರ ಅವಧಿಯವರೆಗೆ ರಾಜ್ಯದ ಬೆಂಗಳೂರು ಮತ್ತು ಮೈಸೂರಿಗೆ ಭೇಟಿ ನೀಡುವ ಕಾರ್ಯಕ್ರಮ ಇರುತ್ತದೆ.

ಮಾನ್ಯ ಉಪಾಧ್ಯಕ್ಷರನ್ನು ರಾಜ್ಯ ಅತಿಥಿಯೆಂದು ಪರಿಗಣಿಸಲಾಗಿರುತ್ತದೆ. ಮಾನ್ಯ ಉಪಾಧ್ಯಕ್ಷರು ದಿನಾಂಕ: 30.11.2011ರಂದು ತಿರುವನಂತಪುರದಿಂದ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಕಾರ್ಯಕ್ರಮದ ಪಟ್ಟಿಯನ್ವಯ ಸಾಯಂಕಾಲ 6.40 ಗಂಟೆಗೆ ಆಗಮಿಸುತ್ತಿದ್ದಾರೆ. ಮಾನ್ಯ ಉಪಾಧ್ಯಕ್ಷರನ್ನು ವಿಮಾನ ನಿಲ್ದಾಣದಿಂದ ಕರೆತರಲು ಹಾಗೂ ಇದಕ್ಕೆ ಸಂಬಂಧಿಸಿದಂತೆ ನಡೆಸಲಾಗುವ ಸಭೆಯಲ್ಲಿ ಪವರ್ ಪಾಯಿಂಟ್ ನಿರೂಪಣೆ ಮಾಡಲು ಹಾಗೂ ಮಾನ್ಯ ಉಪಾಧ್ಯಕ್ಷರನ್ನು ಕಳುಹಿಸಿಕೊಡುವವರೆಗೆ ಅವರ ಜೊತೆಯಲ್ಲಿದ್ದು, ಅಗತ್ಯ ನೆರವನ್ನು ನೀಡಬೇಕಾಗಿರುತ್ತದೆ. ಇದಕ್ಕಾಗಿ ಶ್ರೀ ಬಸವರಾಜಪ್ಪ, ನಿರ್ದೇಶಕರು, (ಎಂ ಅಂಡ್ ಇ ವಿಭಾಗ), ಯೋಜನಾ ಇಲಾಖೆ, ಇವರನ್ನು ನಿಯೋಜಿಸಲಾಗಿದೆ.

B. Chikkaraju

(ಬಿ. ಚಿಕ್ಕರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ 1 ಮತ್ತು 2,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಇವರಿಗೆ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
2. ಮಾನ್ಯ ಉಪಾಧ್ಯಕ್ಷರು, ರಾಜ್ಯ ಯೋಜನಾ ಮಂಡಳಿ, ಇವರ ಆಪ್ತ ಕಾರ್ಯದರ್ಶಿಗಳು.
3. ಸಂಶೋಧನಾ ಸಮಾಲೋಚಕರು ಮತ್ತು ಅಪರ ಕಾರ್ಯದರ್ಶಿಗಳು, ರಾಜ್ಯ ಯೋಜನಾ ಮಂಡಳಿ, ಇವರ ಆಪ್ತ ಸಹಾಯಕರು.
4. ಸರ್ಕಾರದ ಉಪ ಕಾರ್ಯದರ್ಶಿಗಳು (ಆಡಳಿತ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಇವರ ಆಪ್ತ ಸಹಾಯಕರು.
5. ಸಂಬಂಧಿತ ಅಧಿಕಾರಿಗಳು.